# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 435

ಸದಸ್ಯರ ಹೆಸರು : ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರ ಕ್ಷೇತ್ರ)

ಉತ್ತರಿಸುವವರು : ಮಾನ್ಯ ಸಣ್ಣ ಕೈಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 12.12.2018.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಣ್ಣ ಕೈಗಾರಿಕೆ ಎಂದರೇನು; ಸಣ್ಣ ಕೈಗಾರಿಕೆ ವ್ಯಾಪ್ತಿಯಲ್ಲಿ ಬರುವ ಉದ್ದಿಮೆಗಳಾವುವು; (ವಿವರವಾದ ಮಾಹಿತಿ ನೀಡುವುದು) | ಒಂದಕ್ಕಿಂತ ಹೆಚ್ಚು ಕಚ್ಚಾ ಪದಾರ್ಥಗಳನ್ನು ಉಪಯೋಗಿಸಿ ಸಿದ್ಧ ವಸ್ತುಗಳನ್ನು ಉತ್ಪಾದನೆ ಮಾಡುವ/ಸಂಸ್ಕರಿಸುವ ಘಟಕಕ್ಕೆ ಕೈಗಾರಿಕೆ ಎನ್ನುತ್ತಾರೆ.<br><br>ಕೈಗಾರಿಕೆಗಳನ್ನು ಉತ್ಪಾದನಾ ಹಾಗೂ ಸೇವಾ ಘಟಕಗಳೆಂದು ಚಟುವಟಿಕೆ ಆಧಾರದ ಮೇಲೆ ವಿಂಗಡಿಸಲಾಗಿದೆ.<br><br>ಭಾರತ ಸರ್ಕಾರದ ಎಂಎಸ್ಎಂಇ ಕಾಯ್ದೆ 2006ರ ಪ್ರಕಾರ ಉತ್ಪಾದನಾ ಘಟಕಗಳನ್ನು ಅವುಗಳ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಹೂಡುವ ಬಂಡವಾಳದ ರೀತ್ಯ ಕೆಳಕಂಡಂತೆ ವರ್ಗೀಕರಿಸಲಾಗಿದೆ.<br>1. **ಸಣ್ಣ ಉದ್ಯಮಗಳು ತಯಾರಿಕೆ**<br>ರೂ. 25.00 ಲಕ್ಷ ಮೀರಿ ರೂ.500.00 ಲಕ್ಷಗಳವರೆಗಿನ ಬಂಡವಾಳ<br>2. **ಸೇವಾ ಉದ್ಯಮಗಳನ್ನು ಅವುಗಳು ಉಪಕರಣಗಳ ಮೇಲೆ ಹೂಡುವ ಬಂಡವಾಳದ ರೀತ್ಯಾ ಕೆಳಕಂಡಂತೆ ವರ್ಗೀಕರಿಸಲಾಗಿದೆ.**<br>**ಸಣ್ಣ ಉದ್ಯಮಗಳು ಸೇವೆ**<br><br>ರೂ. 10.00 ಲಕ್ಷ ಮೀರಿ ರೂ.200.00 ಲಕ್ಷಗಳವರೆಗೆ<br><br>**ಸಣ್ಣ ಕೈಗಾರಿಕೆ ವ್ಯಾಪ್ತಿಯಡಿ ಬರುವ ಉದ್ದಿಮೆಗಳು:-**<br><br>ಜನರಲ್ ಇಂಜಿನೀಯರಿಂಗ್, ಆಹಾರ ಉತ್ಪನ್ನ ತಯಾರಿಕೆ, ಮುದ್ರಣ, ಪ್ಲಾಸ್ಟಿಕ್ ಪ್ರಾಡಕ್ಟ್, ಚರ್ಮಗಾರಿಕೆ, ಕಟ್ಟಿಗೆ ಮತ್ತು ಸ್ಟೀಲ್ ಪೀಠೋಪಕರಣ, ಸಿದ್ಧ ಉಡುಪು ತಯಾರಿಕೆ, ಗ್ರಾನೈಟ್ ಕಟ್ಟಿಂಗ್ & ಪಾಲಿಶಿಂಗ್, ಆಟೋಮೊಬೈಲ್ಸ್, ಫ್ಯಾಬ್ರಿಕೇಷನ್ ವರ್ಕ್ಸ್, ಕಾಟನ್ ಜಿನ್ನಿಂಗ್ & ಪ್ರೆಸ್ಸಿಂಗ್ ಮತ್ತು ಆಹಾರ ಸಂಸ್ಕರಣ ಘಟಕಗಳು ಇತ್ಯಾದಿ. |
| ಆ) | ಸಣ್ಣ ಕೈಗಾರಿಕೆ ಇಲಾಖೆ ಅಧೀನದಲ್ಲಿರುವ ಸಾರ್ವಜನಿಕ ನಿಗಮಗಳು/ಕಂಪನಿಗಳು, ಶಾಸನಬದ್ಧ ಮಂಡಳಿಗಳು, ಉದ್ದಿಮೆಗಳು, ಅಂಗ ಸಂಸ್ಥೆಗಳು ಮತ್ತು ಸೊಸೈಟಿಗಳು ಹಾಗೂ ಇತರೆ ಎಷ್ಟಿವೆ; ಅವು ಯಾವುವು; (ವಿವರವಾಗಿ ಕೇಂದ್ರ, ಕಚೇರಿ, ವಿಳಾಸ | ಸಣ್ಣ ಕೈಗಾರಿಕೆ ಇಲಾಖೆ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು / ಮಂಡಳಿಗಳು ಕೆಳಗಿನಂತಿರುತ್ತವೆ:<br><br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ತೆಂಗಿನ ನಾರಿನ<br>ಸಹಕಾರ ಮಹಾ ಮಂಡಳಿ ನಿಯಮಿತ |

| | | |
|---|---|---|
| | ಹಾಗೂ ದೂರವಾಣಿ ಸಂಖ್ಯೆಗಳನ್ನು ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು) | ಕೈಗಾರಿಕಾ ವಸಾಹತು, ರಾಜಾಜಿನಗರ,<br>ಬೆಂಗಳೂರು-560 010.<br>ದೂರವಾಣಿ ಸಂಖ್ಯೆ: 080-23154220<br><br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ,<br>ವಿ.ಐ.ಟಿ.ಸಿ ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು-560 001.<br>ದೂರವಾಣಿ ಸಂಖ್ಯೆ: 080-22865866<br><br>ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು<br>ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ,<br>ಖಾದಿ ಭವನ, ನಂ.10, ಜಸ್ಮಾ ಭವನ ರಸ್ತೆ,<br>ಬೆಂಗಳೂರು-560 052<br>ದೂರವಾಣಿ ಸಂಖ್ಯೆ: 080-22643445<br><br>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)<br>ನೊಂದಾಯಿತ ಕಛೇರಿ:ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು – 560 010<br>ದೂರವಾಣಿ ಸಂಖ್ಯೆ 080-23407011 ರಿಂದ 25,<br>ಫ್ಯಾಕ್ಸ್ :91-080-23143566 / 23389070<br>ಇ-ಮೇಲ್ : kssidcho@vsnl.com<br>ವೆಬ್‌ಸೈಟ್: www.kssidc.co.in<br><br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ<br>ನಿಗಮ ನಿಯಮಿತ [KSHDC Ltd.],<br>39, 2ನೇ ಮಹಡಿ, ಯುನೈಟೆಡ್ ಮ್ಯಾನ್ಷನ್, ಎಂ.ಜಿ.ರಸ್ತೆ,<br>ಬೆಂಗಳೂರು-01.<br>ದೂ.ಸಂ. 080-25582656/ 71204445/71204446/25582793<br>ಫ್ಯಾಕ್ಸ್: 91-080-25580402<br>ಇಮೇಲ್: md@cauveryhandicrafts.net<br>ವೆಬ್‌ಸೈಟ್: http//www.cauverycrafts.com<br><br>ನಿರ್ದೇಶಕರು,<br>ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ,<br>ಉಲ್ಲಾಳ ಉಪ ನಗರ, ಬೆಂಗಳೂರು – 560 110.<br>ದೂ.ಸಂ. 080-23480179<br>ಇಮೇಲ್: kiltbangalore133@gmail.com<br>ವೆಬ್‌ಸೈಟ್: http//www.kiltbangalore.ac.in |

| | | |
|---|---|---|
| | | ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು,<br>ವಿ.ಐ.ಟಿ.ಸಿ ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು-560 001.<br>ದೂರವಾಣಿ ಸಂಖ್ಯೆ: 080-22860772 / 22866348.<br>ಇಮೇಲ್: md.kctu@gmail.com<br>ವೆಬ್‌ಸೈಟ್: http// www.kctu.kar.nic.in/ |
| ಇ) | ರಾಜ್ಯದಲ್ಲಿರುವ ಸಣ್ಣ ಕೈಗಾರಿಕಾ ನೀತಿ ಏನು; ಇದು ಯಾವ ದಿನಾಂಕದಿಂದ ಜಾರಿಗೆ ಬಂದಿದೆ; (ವಿವರವಾದ ಮಾಹಿತಿ ನೀಡುವುದು) | ಕರ್ನಾಟಕ ಸರ್ಕಾರವು ಕೈಗಾರಿಕಾ ನೀತಿ 2014-19 ಅನ್ನು ಜಾರಿಗೆ ತಂದಿರುತ್ತದೆ. ದಿನಾಂಕ 01-10-2014 ರಿಂದ ಜಾರಿಗೆ ಬಂದಿರುತ್ತದೆ. ಕೈಗಾರಿಕಾ ಅಭಿವೃದ್ಧಿಯಲ್ಲಿ ಅತೀ ಹಿಂದುಳಿದ, ಹಿಂದುಳಿದ, ಅಭಿವೃದ್ಧಿ ಹೊಂದುತ್ತಿರುವ ಹಾಗೂ ಅಭಿವೃದ್ಧಿ ಹೊಂದಿರುವ ಜಿಲ್ಲೆ/ತಾಲ್ಲೂಕುಗಳನ್ನು ಆಧರಿಸಿ ವಲಯ-1 ರಿಂದ 4 ರವರೆಗೆ ಹೈದ್ರಾಬಾದೇತರ ಕರ್ನಾಟಕ ಮತ್ತು ವಲಯ 1 & 2 ರವರೆಗೆ ಹೈದ್ರಾಬಾದ್ ಕರ್ನಾಟಕ ವಲಯಗಳೆಂದು ವಿಂಗಡಿಸಿ ಕೆಳಕಂಡ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ.<br>1. ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿ.<br>2. ಬಂಡವಾಳ ಹೂಡಿಕೆ ಸಹಾಯಧನ<br>3. ಬಡ್ಡಿ ಸಹಾಯಧನ<br>4. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>5. ಪ್ರವೇಶ ತೆರಿಗೆ ವಿನಾಯಿತಿ.<br>6. ರಫ್ತು ಆದಾರಿತ ಘಟಕಗಳಿಗೆ ರಿಯಾಯಿತಿ.<br>7. ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ.<br>8. ತ್ಯಾಜ್ಯ ಸಂಸ್ಕರಣಾ ಯಂತ್ರ ಸ್ಥಾಪನೆಗೆ ಸಹಾಯಧನ.<br>9. ವಿದ್ಯುತ್ ತೆರಿಗೆ ವಿನಾಯಿತಿ<br>10. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಮತ್ತು ಪೇಟೆಂಟ್ ನೋಂದಣಿ ಸಹಾಯಧನ<br>11. ಮಳೆ ನೀರು ಕೊಯ್ಲು / ಸಂರಕ್ಷಣೆ ಸಹಾಯಧನ<br>12. ಶಕ್ತಿ ಸಂರಕ್ಷಣೆ ಸಹಾಯಧನ<br>13. ಯೋಜನಾ ವರದಿ ತಯಾರಿಕಾ ವೆಚ್ಚ ಮರುಪಾವತಿ.<br>14. ಎಸ್‌ಸಿ/ಎಸ್‌ಟಿ ಉದ್ಯಮಶೀಲರಿಗೆ ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನ ಹಂಚಿಕೆ ಮಾಡಲಾಗುವುದು. |
| ಈ) | ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಸಂಬಂಧ ಇಲ್ಲಿಯವರೆಗೆ ಎಷ್ಟು ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲಾಗಿದೆ; ಲಭ್ಯವಿರುವ ಕೈಗಾರಿಕಾ ನಿವೇಶನಗಳು ಎಷ್ಟು; (ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು) | ರಾಜ್ಯದಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಸಲುವಾಗಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ರಾಜ್ಯದಲ್ಲಿನ ವಿವಿಧ ಸ್ಥಳಗಳಲ್ಲಿ ಅವಶ್ಯ ಮೂಲಭೂತ ಸೌಕರ್ಯಗಳೊಂದಿಗೆ ಈವರೆವಿಗೂ ಒಟ್ಟು 187 ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿರುತ್ತದೆ. ಅಂತೆಯೇ, ದಿನಾಂಕ 31.10.2018ವರೆಗೂ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ನಿರ್ಮಾಣ ಮಾಡಿರುವ ಕೈಗಾರಿಕಾ ಮಳಿಗೆ (ಮಳಿಗೆ/ಫ್ಲ್ಯಾಟ್ಸ್/ ಅಂಗಡಿ/ಗೋದಾಮು ಒಳಗೊಂಡಂತೆ) ಮತ್ತು ಅಭಿವೃದ್ಧಿಪಡಿಸಿರುವ ಕೈಗಾರಿಕಾ ನಿವೇಶನಗಳು, ಅವುಗಳ ಹಂಚಿಕೆ |

| | | |
|---|---|---|
| | | ಹಾಗೂ ಖಾಲಿ ಉಳಿದಿರುವ ಕೈಗಾರಿಕಾ ಮಳಿಗೆ/ನಿವೇಶನಗಳ ವಿವರಗಳ ಜಿಲ್ಲಾವಾರು ಮಾಹಿತಿಯು ಅನುಬಂಧ-1ರಲ್ಲಿ ಲಗತ್ತಿಸಿದೆ. |
| ಉ) | ಖಾಲಿ ಕೈಗಾರಿಕಾ ನಿವೇಶನಗಳನ್ನು ಹಂಚಲು ಇರುವ ಮಾನದಂಡಗಳೇನು? (ವಿವರವಾದ ಮಾಹಿತಿ ನೀಡುವುದು) | ನಿಗಮದ ವತಿಯಿಂದ ಸಣ್ಣ ಉದ್ದಿಮೆದಾರರುಗಳಿಗೆ ಅವರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಮಳಿಗೆ/ನಿವೇಶನಗಳನ್ನು ಹಂಚಿಕೆ ಮಾಡಲು ತನ್ನದೇ ಆದ ಮಳಿಗೆ/ನಿವೇಶನಗಳ ಹಂಚಿಕೆ ನಿಯಮಗಳು-2004 ಅನ್ನು ರೂಪಿಸಿಕೊಂಡಿದ್ದು, ಅದರಂತೆ, ಮಳಿಗೆ/ನಿವೇಶನಗಳ ಹಂಚಿಕೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳು ಈ ಕೆಳಕಂಡಂತಿರುತ್ತವೆ. ಅಲ್ಲದೇ, ಮಳಿಗೆ/ನಿವೇಶನಗಳ ಹಂಚಿಕೆ ಸಲುವಾಗಿ ನಿಗಮವು ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19 ರಂತೆ ಹಂಚಿಕೆ ಮೀಸಲಾತಿ ಅಳವಡಿಸಿಕೊಂಡಿರುತ್ತದೆ.<br><br>**ಮೀಸಲಾತಿ ಸೌಲಭ್ಯ:**<br>ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ - ಶೇ. 22.50<br>ಮಹಿಳಾ ಉದ್ಯಮಿಗಳು - ಶೇ, 5.00<br>ಅಲ್ಪಸಂಖ್ಯಾತರು, ವಿಕಲಚೇತನರು,<br>ಹಿಂದುಳಿದ ವರ್ಗ (ವರ್ಗ-1 & 2ಎ)<br>ಮಾಜಿ ಸೈನಿಕರು - ಶೇ. 5.00<br><br>ಕೆಎಸ್‌ಎಸ್‌ಐಡಿಸಿ ಸ್ಥಾಪಿಸಿರುವ ಕೈಗಾರಿಕಾ ವಸಾಹತುಗಳಲ್ಲಿನ ಖಾಲಿ ನಿವೇಶನ/ಮಳಿಗೆಗಳ ಹಂಚಿಕೆ ಸಂಬಂಧ ಹಂಚಿಕಾ ಪತ್ರಿಕಾ ಪ್ರಕಟಣೆ ನೀಡಿ ಆಸಕ್ತ ಭಾವೀ ಸಣ್ಣ ಉದ್ದಿಮೆದಾರರುಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಪ್ರಕಟಣೆಯ ವಿವರಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿಯೂ ಸಹ ಅಳವಡಿಸಲಾಗುತ್ತದೆ.<br>ಆಸಕ್ತ ಸಣ್ಣ ಉದ್ದಿಮೆದಾರರುಗಳು ನಿಗದಿತ ಅರ್ಜಿ ನಮೂನೆಯನ್ನು ವೆಬ್‌ಸೈಟ್ ಮುಖೇನವಾಗಲೀ ಅಥವಾ ನಿಗಮದ ಸಂಬಂಧಪಟ್ಟ ಕಛೇರಿಗಳಿಂದ ಪಡೆದು ನಿಗದಿತ ಅರ್ಜಿ ಶುಲ್ಕ, ಪರಿಶೀಲನಾ ಶುಲ್ಕ ಹಾಗೂ ಮಳಿಗೆ/ನಿವೇಶನಗಳ ಮೌಲ್ಯದ ಮೇಲೆ ನಿಗದಿಪಡಿಸಿರುವಂತೆ ಅನ್ವಯವಾಗುವ ಮುಂಗಡ ಠೇವಣಿ ಹಣದೊಂದಿಗೆ ಮತ್ತು ಅವಶ್ಯ ದಾಖಲಾತಿಗಳೊಂದಿಗೆ ಸಲ್ಲಿಸಬೇಕಿರುತ್ತದೆ.<br>ಸ್ವೀಕೃತಗೊಂಡ ಅರ್ಜಿಗಳನ್ನು ರಾಜ್ಯ ಮಟ್ಟದ ಮಳಿಗೆ ಹಂಚಿಕೆ ಸಮಿತಿ/ಜಿಲ್ಲಾಮಟ್ಟದ ಏಕಗವಾಕ್ಷಿ ಪರಾಮರ್ಶಿತ ಸಮಿತಿಯು ನಿಯಮಾನುಸಾರ ಪರಿಶೀಲಿಸಿ, ಅರ್ಜಿದಾರರು ಸಲ್ಲಿಸಿರುವ ಅವಶ್ಯ ದಾಖಲೆಗಳ ಆಧಾರದ ಮೇಲೆ ಹಂಚಿಕೆಯ ಬಗ್ಗೆ ನಿಗಮದ ಮಂಡಳಿಯ ಮಾರ್ಗಸೂಚಿಗಳನ್ನು ಅನುಸರಿಸಿ, ಅಂಕಗಳನ್ನು ನೀಡಲಾಗುವುದು ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಹಂಚಿಕೆ |

| | | |
|---|---|---|
| | | ಸಮಿತಿಯು ಮಂಡಳಿಯಿಂದ ನಿಗದಿಪಡಿಸಲಾಗಿರುವ ಮಾನದಂಡಗಳ ಆಧಾರದ ಮೇಲೆ ಹಂಚಿಕೆಯನ್ನು ಪರಿಗಣಿಸುವುದು. ಬೆಂಗಳೂರು ನಗರ/ ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಪ್ರಕರಣಗಳಲ್ಲಿ ರಾಜ್ಯಮಟ್ಟದ ಮಳಿಗೆ ಹಂಚಿಕೆ ಸಮಿತಿಯಿಂದ ಹಂಚಿಕೆ ಮಾಡಲಾಗುವುದು.<br>ನಿವೇಶನ/ಮಳಿಗೆ ಲಭ್ಯತೆ, ಮೀಸಲಾತಿ ಇತ್ಯಾದಿ ಪ್ರಮುಖ ಅಂಶಗಳನ್ನು ಪರಿಗಣಿಸಿ, ಹೆಚ್ಚಿನ ಅಂಕ ಪಡೆದ ಅರ್ಜಿದಾರರುಗಳಿಗೆ ಮಳಿಗೆ/ನಿವೇಶನಗಳ ಹಂಚಿಕೆಗೆ ಶಿಫಾರಸ್ಸು ಮಾಡಲಾಗುವುದು.<br>ಯಾವುದಾದರೂ ಒಂದು ನಿವೇಶನ ಅಥವಾ ಒಂದು ಮಳಿಗೆಗೆ 6 ಅಥವಾ 6ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಲ್ಲಿ, ಹರಾಜುಮುಖೇನ ಹಂಚಿಕೆ ಪ್ರಕ್ರಿಯೆ ಕೈಗೊಂಡು ಅರ್ಜಿದಾರರುಗಳ ಪೈಕಿ ಹರಾಜಿನಲ್ಲಿ ಹೆಚ್ಚಿನ ಮೌಲ್ಯ ಬಿಡ್ ಮಾಡಿದವರಿಗೆ ಹಂಚಿಕೆಗೆ ಪರಿಗಣಿಸಲಾಗುವುದು.<br>ಮೇಲಿನಂತೆ ಶಿಫಾರಸ್ಸುಗಳನ್ನು ಆಯಾ ಜಿಲ್ಲೆಯ, ಜಿಲ್ಲಾ ಮಟ್ಟದ ಏಕಗವಾಕ್ಷಿ ಹಂಚಿಕೆ ಸಮಿತಿ ಮುಂದೆ ಮಂಡಿಸಿ, ಸಮಿತಿಯ ಅನುಮೋದನೆ ಪಡೆದ ನಂತರದಲ್ಲಿಯೇ ಹಂಚಿಕೆ ನಿಯಮಾನುಸಾರ ಹಂಚಿಕೆ ಪತ್ರ ವಿತರಿಸಲಾಗುವುದು.<br>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಹಾಲಿ ಜಾರಿಯಲ್ಲಿರುವ ಮಳಿಗೆ/ ನಿವೇಶನಗಳ ಹಂಚಿಕೆ ನಿಯಮಾವಳಿಗಳನ್ವಯ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ದಿಮೆದಾರರುಗಳಿಗೆ ಹಂಚಿಕೆ ಮೀಸಲಾತಿಯನ್ವಯ ಮೀಸಲಿಟ್ಟಿರುವ ಖಾಲಿ ಮಳಿಗೆ/ನಿವೇಶನಗಳ ಹಂಚಿಕೆ ಅವಧಿಯನ್ನು ಕನಿಷ್ಠ ಮೂರು (03) ವರ್ಷಗಳ ಅವಧಿಗೆ ಮೀಸಲಿಡಲಾಗುತ್ತಿದೆ. |

ಸಿಐ 127 ಸಿಎಸ್‌ಸಿ 2018

[ಎಸ್.ಆರ್. ಶ್ರೀನಿವಾಸ್ (ವಾಸು)]

ಸಣ್ಣ ಕೈಗಾರಿಕೆ ಸಚಿವರು

| ಅನುಬಂಧ-1 | | | | | | | |
|---|---|---|---|---|---|---|---|
| ಕ್ರ. ಸಂ. | ಜಿಲ್ಲೆಗಳು | ಮಳಿಗೆ/ಫ್ಲ್ಯಾಟ್ಸ್/ಅಂಗಡಿ/ಗೋದಾಮು | | | ನಿವೇಶನಗಳು | | |
| | | ನಿರ್ಮಾಣ | ಹಂಚಿಕೆ | ಖಾಲಿ | ಅಭಿವೃದ್ಧಿ | ಹಂಚಿಕೆ | ಖಾಲಿ |
| 1 | ಬೆಂಗಳೂರು ನಗರ | 2035 | 2027 | 8 | 610 | 602 | 8 |
| 2 | ಬೆಂಗಳೂರು ಗ್ರಾಮಾಂತರ | 294 | 278 | 16 | 666 | 518 | 148 |
| 3 | ರಾಮನಗರ | 56 | 53 | 3 | 131 | 115 | 16 |
| 4 | ಚಿಕ್ಕಬಳ್ಳಾಪುರ | 86 | 46 | 40 | 171 | 104 | 67 |
| 5 | ಕೋಲಾರ | 110 | 109 | 1 | 124 | 124 | 0 |
| 6 | ತುಮಕೂರು | 144 | 143 | 1 | 428 | 381 | 47 |
| 7 | ಚಿತ್ರದುರ್ಗ | 84 | 83 | 1 | 781 | 178 | 603 |
| 8 | ದಾವಣಗೆರೆ | 127 | 124 | 3 | 319 | 228 | 91 |
| 9 | ಮೈಸೂರು | 568 | 568 | 0 | 308 | 304 | 4 |
| 10 | ಮಂಡ್ಯ | 134 | 120 | 14 | 122 | 101 | 21 |
| 11 | ಚಾಮರಾಜನಗರ | 44 | 36 | 8 | 104 | 91 | 13 |
| 12 | ಕೊಡಗು | 38 | 38 | 0 | 45 | 40 | 5 |
| 13 | ಶಿವಮೊಗ್ಗ | 204 | 202 | 2 | 451 | 263 | 188 |
| 14 | ಚಿಕ್ಕಮಗಳೂರು | 42 | 38 | 4 | 119 | 118 | 1 |
| 15 | ಹಾಸನ | 120 | 119 | 1 | 223 | 214 | 9 |
| 16 | ದಕ್ಷಿಣ ಕನ್ನಡ | 289 | 285 | 4 | 149 | 145 | 4 |
| 17 | ಉಡುಪಿ | 78 | 75 | 3 | 72 | 68 | 4 |
| 18 | ಧಾರವಾಡ | 592 | 589 | 3 | 791 | 734 | 57 |
| 19 | ಗದಗ | 34 | 31 | 3 | 261 | 259 | 2 |
| 20 | ಹಾವೇರಿ | 32 | 32 | 0 | 300 | 259 | 41 |
| 21 | ಉತ್ತರಕನ್ನಡ | 110 | 110 | 0 | 488 | 483 | 5 |
| 22 | ಬೆಳಗಾವಿ | 401 | 399 | 2 | 595 | 408 | 187 |
| 23 | ವಿಜಯಪುರ | 76 | 75 | 1 | 255 | 230 | 25 |
| 24 | ಬಾಗಲಕೋಟೆ | 72 | 70 | 2 | 246 | 238 | 8 |
| 25 | ಕಲಬುರಗಿ | 240 | 233 | 7 | 579 | 535 | 44 |
| 26 | ಯಾದಗೀರ್ | 4 | 4 | 0 | 224 | 222 | 2 |
| 27 | ಬೀದರ್ | 90 | 90 | 0 | 341 | 291 | 50 |
| 28 | ಬಳ್ಳಾರಿ | 116 | 115 | 1 | 294 | 220 | 74 |
| 29 | ರಾಯಚೂರು | 60 | 59 | 1 | 211 | 211 | 0 |
| 30 | ಕೊಪ್ಪಳ | 4 | 4 | 0 | 0 | 0 | 0 |
| | ಒಟ್ಟು | 6284 | 6155 | 129 | 9408 | 7684 | 1724 |